# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀ ಹೊನ್ನಪ್ಪ ಗೌಡ, ಹಿಂದಿನ ಕಾರ್ಯದರ್ಶಿ (ಹಾಲಿ ನಿವೃತ್ತ), ಗೋಗಿ ಕೋನ ಗ್ರಾಮ ಪಂಚಾಯಿತಿ, ಶಹಾಪೂರ ತಾಲ್ಲೂಕು, ಕಲಬುರಗಿ ಜಿಲ್ಲೆ. ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14-ಎ ಅಡಿಯಲ್ಲಿ ಮಾನ್ಯ ಉಪಲೋಕಯುಕ್ತರಿಗೆ ವಹಿಸುವ ಬಗ್ಗೆ – ಆದೇಶ.

**ಓದಲಾಗಿದೆ:**

ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಅಸಪ ಸಂಖ್ಯೆ:ಉಪಲೋಕ್/ ಜಿಎಲ್‌ಬಿ-/53/2009/ಡಿಆರ್‌ಇ-3 ದಿನಾಂಕ:22.02.2018.

**ಪ್ರಸ್ತಾವನೆ:**

ಮಾನ್ಯ ಲೋಕಾಯುಕ್ತರರವರು, ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ಶ್ರೀ ಶಾಂತನಗೌಡ ಎಸ್, ಗೂಗಲ್ ಜಲಾನಯನ ಅಭಿವೃದ್ಧಿ ಅಧಿಕಾರಿ ಶಹಾಪೂರ ತಾಲ್ಲೂಕು, ಕಲಬುರಗಿ ಜಿಲ್ಲೆ. ಪ್ರತ್ತುತ ಸಹಾಯಕ ಕೃಷಿ ಅಧಿಕಾರಿಗಳು ಯಡ್ರಾಮಿ ಜೇವರ್ಗಿ ತಾಲ್ಲೂಕು, ಕಲಬುರಗಿ ಜಿಲ್ಲೆ ಹಾಗೂ ಶ್ರೀ ಹೊನ್ನಪ್ಪ ಗೌಡ ಕಾರ್ಯದರ್ಶಿ, ಗೋಗಿ ಕೋನ ಗ್ರಾಮ ಪಂಚಾಯಿತಿ, ಶಹಾಪೂರ ತಾಲ್ಲೂಕು, ಕಲಬುರಗಿ ಜಿಲ್ಲೆ. ವಾಸ ಬಸವಂತಪುರ ಶಹಪೂರ ತಾಲ್ಲೂಕು, ಕಲಬುರಗಿ ಜಿಲ್ಲೆ ರವರುಗಳು ಕ್ರಮವಾಗಿ 1 ಮತ್ತು 2 ನೇ ಆರೋಪಿಗಳ ವಿರುದ್ಧ ಶ್ರೀ ಮೊಹಮ್ಮದ್ ಇಸ್ಮಯಿಲ್ ತಂದೆ ಖಾಜಾ ಸಾಬ್ ಬಿ ಚದ್ರಿ ಗೋಗಿ ಕೋನ ರವರು ಲೋಕಾಯುಕ್ತರಿಗೆ ನೀಡಿದ ದೂರಿನ ಹಿನ್ನೆಲೆಯಲ್ಲಿ ಮಾನ್ಯ ಲೋಕಾಯುಕ್ತರು ಸದರಿ ದೂರನ್ನು ಪರಿಶೀಲಿಸಿ, ಆರೋಪಿತರು ಕೆಲಸ ನಿರ್ವಹಿಸುತ್ತಿದ್ದ ಈ ಹಿಂದಿನ ಗೋಗಿ ಕೋನ ಗ್ರಾಮ ಪಂಚಾಯಿತಿಯಲ್ಲಿ ಯಾವುದೇ ಕೆಲಸವನ್ನು ನಿರ್ವಹಿಸದೆ ಜಲಾನಯನ ಅಭಿವೃದ್ಧಿ ಇಲಾಖೆಯಲ್ಲಿನ 2006-07ರಿಂದ 2008-09ರ ವರೆಗಿನ ನರೇಗಾ ಯೋಜನೆಯಲ್ಲಿ ಇಬ್ಬರೂ ಅಧಿಕಾರಿಗಳು ಸೇರಿ ಸಾರ್ವಜನಿಕ ಹಣವನ್ನು ದುರ್ಬಳಕೆ ಮಾಡಿಕೊಂಡಿರುತ್ತಾರೆ.

ಪ್ರಕರಣವು ಮುಖ್ಯ ಅಭಿಯಂತರರು, ತಾಂತ್ರಿಕ ಲೆಕ್ಕ ಪರಿಶೋಧನೆ ರವರಿಗೆ ದಿನಾಂಕ:13.03.2009ರಂದು ವರದಿ ನೀಡುವಂತೆ ಕೋರಿದ್ದು ಆದರೆ ಯಾವುದೇ ವರದಿಯು ಸದರಿ ಪ್ರಾಧಿಕಾರದಿಂದ ಸಲ್ಲಿಕೆಯಾಗಿರುವುದಿಲ್ಲ. ಕಾರ್ಯನಿರ್ವಹಣಾಧಿಕಾರಿ ತಾಲ್ಲೂಕು ಪಂಚಾಯಿತಿ ಶಹಾಪುರ ರವರು ಶ್ರೀ ಪಂಡಾರಿ ಚೌಹಾಣ್ ತಾಲ್ಲೂಕು ಯೋಜನಾಧಿಕಾರಿ ಶಹಾಪುರ ಮತ್ತು ಶ್ರೀ ಈರಣ್ಣ ಪಾಟೀಲ್ ಸಹಾಯಕ ನಿರ್ದೇಶಕರು, ಗ್ರಾಮೀಣ ಉದ್ಯೋಗ ತಾಲ್ಲೂಕು ಪಂಚಾಯಿತಿ ಶಹಾಪುರ ರವರ ದಿನಾಂಕ:31-01-2012ರ ಜಂಟಿ ವರದಿಯನ್ನು ಮುಖ್ಯ ಅಭಿಯಂತರರು ಕರ್ನಾಟಕ ಲೋಕಾಯುಕ್ತ ರವರಿಗೆ ದಿನಾಂಕ:02-02-2012ರಲ್ಲಿ ವರದಿ ಸಲ್ಲಿಸಿರುತ್ತಾರೆ. ಸದರಿ ಅಧಿಕಾರಿಗಳು ತಮ್ಮ ಜಂಟಿ ತನಿಖಾ ವರದಿಯಲ್ಲಿ ಈ ಕೆಳಕಂಡ ಐದು ಕೆಲಸಗಳನ್ನು ನರೇಗಾ ಯೋಜನೆಯಡಿ ನಿರ್ವಹಿಸಿದ ಬಗ್ಗೆ ಮಾಹಿತಿಯನ್ನು ನೀಡಿರುತ್ತಾರೆ.

1) ನಾಲಾ ತಿರುಗಾಲುವೆ, ಬ್ಲಾಕ್ ನಂ-3 (ಗೋಗಿ ಕೆ) ಜಾಬ್ ಕೋಡ್ ನಂ. 1515008018/ ಡಬ್ಲ್ಯೂಹೆಚ್/2269, ಸರ್ವೆ ನಂ.30 (ಚಂದಪ್ಪ ಬಿನ್ ಶಂಕ್ರಪ್ಪ ಹಲಗಿ)
2) ನಾಲಾ ತಿರುಗಾಲುವೆ, ಬ್ಲಾಕ್ ನಂ-೪ (ಗೋಗಿ ಕೆ) ಜಾಬ್ ಕೋಡ್ ನಂ. 1515008018/ ಡಬ್ಲ್ಯೂಹೆಚ್/2252, ಸರ್ವೆ ನಂ.744 ( ಹನುಮಂತ ಜಿನ್ ಮಲ್ಲಪ್ಪ)
3) ನಾಲಾ ತಿರುಗಾಲುವೆ ಬ್ಲಾಕ್ ನಂ-1 (ಗೋಗಿ ಕೆ) ಜಾಬ್ ಕೋಡ್ ನಂ. 1515008018/ ಡಬ್ಲ್ಯೂಹೆಚ್/2249, ಸರ್ವೆ ನಂ.734 ( ಸಾಯಬಣ್ಣ ಚಂದಪ್ಪ ಶರಣಪ್ಪ ಹಲಗಿ.)
4) ನಾಲಾ ಟ್ರೈನಿಂಗ್ (ಗೋಗಿ ಕೆ) ಜಾಬ್ ಕೋಡ್ ನಂ. 1515008018/ಡಬ್ಲ್ಯೂಸಿ/814357, ಸರ್ವೆ ನಂ 396 ( ಮೋಹನ್ ರೆಡ್ಡಿ ಬಿನ್ ಶರಣಪ್ಪ) (in consolidated payment details, survey number is overwritten and mentioned as 399.)
5) ನಾಲಾ ಟ್ರೈನಿಂಗ್, ಬ್ಲಾಕ್ ನಂ-3 (ಗೋಗಿ ಕೆ) ಜಾಬ್ ಕೋಡ್ ನಂ. 1515008018/ಡಬ್ಲ್ಯೂಸಿ/814353, ಸರ್ವೆ ನಂ. 136 ( ಚಂದಪ್ಪಾ ಬಿನ್ ಮಲ್ಲಪ್ಪ)

ಜಂಟಿ ವರದಿಯಲ್ಲಿ ಮೇಲಿನ ಎಲ್ಲಾ ಕೆಲಸಗಳು ಕಾರ್ಯಗತಗೊಂಡಿದ್ದು ಅದರಂತೆ ಈ ಕೆಳಕಂಡಂತೆ ವರದಿಯಲ್ಲಿ ಉಲ್ಲೇಖಿಸಿರುತ್ತಾರೆ.

ಆರೋಪದ ಅವಧಿಯ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಎಂ.ಜಿ.ಎನ್.ಆರ್.ಇ.ಜಿ.ಎ ಯೋಜನೆಯ ಕಿರ್ದಿ ಪುಸ್ತಕ, ಅಂದಾಜು ಪತ್ರಿಕೆ, ಹಾಜರಿ ಪಟ್ಟಿ, ಬ್ಯಾಂಕ್ ಪಾಸ್ ಚೀಟಿ ತನಿಖಾ ಸಮಯದಲ್ಲಿ ಸಾದರಪಡಿಸಿರುತ್ತಾರೆ. ಅಳತೆ ಪುಸ್ತಕವನ್ನು ಗ್ರಾಮ ಪಂಚಾಯತಿ ಕಾರ್ಯದರ್ಶಿಗಳಾದ ಶ್ರೀ ಹೊನ್ನಪ್ಪ ಬಿನ್ ಬಸಲಿಂಗಪ್ಪ ಇವರು ತನಿಖೆಗೆ ಸಾದರಪಡಿಸಿರುವುದಿಲ್ಲ ಹಾಗೂ ಹಾಜರಿ ಪಟ್ಟಿಗಳ ಆದಾರದ ಮೇರೆಗೆ ಕೂಲಿಕಾರರಿಗೆ ಬ್ಯಾಂಕ್ ಖಾತೆ ಮುಖಾಂತರ ಹಣ ಪಾವತಿಸಿದ ಪ್ರತಿಯನ್ನು ತನಿಖಾ ಸಮಯದಲ್ಲಿ ಸಲ್ಲಿಸಿರುವುದಿಲ್ಲ.

ಕಾಮಗಾರಿಗಳ ಅಳತೆ ಪುಸ್ತಕವನ್ನು ಶ್ರೀ ಶಾಂತಗೌಡ, ಕೃಷಿ ಸಹಾಯಕ ಇವರು ನನಗೆ ಸಲ್ಲಿಸಿರುವುದಿಲ್ಲ, ನನಗೆ ಬರೆ ಹಾಜರಿ ಪುಸ್ತಕ ಸಲ್ಲಿಸಿರುತ್ತಾರೆ. ಹಾಜರಿ ಪಟ್ಟಿ ಆಧಾರದ ಮೇರೆಗೆ ಕೂಲಿಕಾರರ ಖಾತೆ ಜಮಾ ಮಾಡಿರುತ್ತೇನೆ. ಕಾಮಗಾರಿಗಳ ಬೋರ್ಡ್ ಖರೀದಿಸಿರುವುದಿಲ್ಲಾ ಹೀಗೆಂದು ತಾವು ತನಿಖೆಗಾಗಿ ಬರೆದಿದ್ದು ಮಾಹಿತಿಯನ್ನು ತಮ್ಮಲ್ಲಿ ಸಲ್ಲಿಸುತ್ತಿದ್ದೇನೆ. ಎಂದು 2ನೇ ಎದುರುದಾರರಾದ ಶ್ರೀ ಹೊನ್ನಪ್ಪ ಗೌಡ, ಹಿಂದಿನ ಕಾರ್ಯದರ್ಶಿ (ಹಾಲಿ ನಿವೃತ್ತ), ಗೋಗಿ ಕೋನ ಗ್ರಾಮ ಪಂಚಾಯಿತಿರವರು ತಮ್ಮ ದಿನಾಂಕ 28.12.2012ರ ವರದಿಯಲ್ಲಿ ತಿಳಿಸಿರುತ್ತಾರೆ ಮುಂದುವರೆದು ಎದುರುದಾರ 1ರ ಶ್ರೀ ಶಾಂತನ ಗೌಡ ಕೃಷಿ ಸಹಾಯಕರು ಅಳತೆ ಪುಸ್ತಕವನ್ನು ಸಲ್ಲಿಸದೆ ಕೇವಲ ಮಾಸ್ಟರ್ ರೋಲ್ ಸಲ್ಲಿಸಿದ್ದು, ಮಾಸ್ಟರ್ ರೋಲ್ ಹಿನ್ನೆಲೆಯಲ್ಲಿ ಕೂಲಿ ಹಣವನ್ನು ಕಾರ್ಮಿಕರ ಖಾತೆಗೆ ಜಮೆ ಮಾಡಲಾಗಿದೆಂದು ವರದಿಯಲ್ಲಿ ತಿಳಿಸಿರುತ್ತಾರೆ. ಇದರಿಂದ ಜಂಟಿ ತನಿಖಾ ವರದಿಯಲ್ಲಿ ಯೋಜನಾಧಿಕಾರಿಗಳು ಮತ್ತು ಸಹಾಯಕ ನಿರ್ದೇಶಕರು ತಿಳಿಸಿದಂತೆ ಎದುದುದಾರ 2 ರವರು ಅಳತೆ ಪುಸ್ತಕವನ್ನು ಸಲ್ಲಿಸದಿರುವುದನ್ನು ಉಲ್ಲೇಖಿಸಲಾಗಿದೆ.

ಎದುರುದಾರ 1 ಮತ್ತು 2 ರವರು ಕಾರ್ಯನಿರ್ವಾಹಣಾಧಿಕಾರಿ ತಾಲ್ಲೂಕು ಪಂಚಾಯಿತಿರವರಿಗೆ ಸಲ್ಲಿಸಿರುವ ವರದಿಯಲ್ಲಿ ತಾವು ನಿರ್ವಹಿಸಿದ ಕೆಲಸವು ಕಾರ್ಯಗತಗೊಂಡಿದ್ದು ಇದರಲ್ಲಿ ಯಾವುದೇ ನ್ಯೂನ್ಯತೆ ಕಂಡು ಬರುವುದಿಲ್ಲವಾದ್ದರಿಂದ ತಮ್ಮ ವಿರುದ್ಧದ ಆರೋಪವನ್ನು ಕೈಬಿಡುವಂತೆ ಕೋರಿರುತ್ತಾರೆ.

2008-09ನೇ ಸಾಲಿನ ನರೇಗಾ ಯೋಜನೆಯಲ್ಲಿ ಎದುರುಧಾರರು ನಿರ್ವಹಿಸಿದ ಕೆಲಸಗಳ ಅಳತೆ ಪುಸ್ತಕವನ್ನು ನಿರ್ವಹಣೆ ಮಾಡಬೇಕಾಗಿದ್ದು ಹಾಗೆಯೇ ಪ್ರತಿ ಹಂತದ ಕೆಲಸದ ವಿವರಗಳನ್ನು 3 ಹಂತದಲ್ಲಿ ಪೋಟೋಗ್ರಾಫಿ ಮಾಡಬೇಕಾಗಿದ್ದು ಸದರಿ ಪ್ರಕ್ರಿಯೆಯನ್ನು ಕೈಗೊಳ್ಳದೆ ಮಸ್ಟರ್ ರೋಲ್ ಆಧಾರದಲ್ಲಿ ಹಣವನ್ನು ಕೂಲಿಕಾರರ ಖಾತೆಗೆ ಪಾವತಿಮಾಡಲಾಗಿದೆಂದು ತಿಳಿಸಿದ್ದರೂ ಸಹ ಅದಕ್ಕೆ ಸಂಬಂಧಿಸಿದ ಯಾವುದೇ ಲಿಖಿತ ಮಾಹಿತಿಯು ಲಭ್ಯವಿಲ್ಲದೆ ಇರುವುದರಿಂದ ಕಾರ್ಯನಿರ್ವಾಹಣಾಧಿಕಾರಿ ತಾಲ್ಲೂಕು ಪಂಚಾತಯಿತಿ ಶಹಾಪುರ ರವರ ವರದಿಯನ್ನು ಒಪ್ಪಲು ಆಸ್ಪದವಿರುವುದಿಲ್ಲ ಹಾಗೂ ಸದರಿಯವರು ತಮ್ಮ ವರದಿಯಲ್ಲಿ ತಿಳಿಸಿರುವಂತೆ ಈ ಐದು ಬಿಲ್ಲುಗಳ ಮಾಹಿತಿಯು ಈ ಕೆಳಕಂಡಂತಿರುತ್ತದೆ.

1. ಸರ್ವೆ ನಂ 30 ಕ್ಕೆ ಸಂಬಂಧಿಸಿದಂತೆ ನಿರ್ವಹಿಸಿದ ಕೆಲಸದ ಬಿಲ್ ರೂ. 35,964/-, ಚೆಕ್ ನಂ. 48938 ದಿನಾಂಕ 28.10.2008.
2. ಸರ್ವೆ ನಂ 744/2 ಕ್ಕೆ ಸಂಬಂಧಿಸಿದಂತೆ ನಿರ್ವಹಿಸಿದ ಕೆಲಸದ ಬಿಲ್ ರೂ. 11,248/-. ಚೆಕ್ ನಂ. 48938 ದಿನಾಂಕ 28.10.2008.
3. ಸರ್ವೆ ನಂ 734 ಕ್ಕೆ ಸಂಬಂಧಿಸಿದಂತೆ ನಿರ್ವಹಿಸಿದ ಕೆಲಸದ ಬಿಲ್ ರೂ. 35,964/-, ಚೆಕ್ ನಂ. 48938 ದಿನಾಂಕ 28.10.2008.
4. ಸರ್ವೆ ನಂ 396 ಕ್ಕೆ ಸಂಬಂಧಿಸಿದಂತೆ ನಿರ್ವಹಿಸಿದ ಕೆಲಸದ ಬಿಲ್ ರೂ. 56,088/-, ಚೆಕ್ ನಂ. 51542 ದಿನಾಂಕ 07.02.2008.
5. ಸರ್ವೆ ನಂ 136, 137 ಕ್ಕೆ ಸಂಬಂಧಿಸಿದಂತೆ ನಿರ್ವಹಿಸಿದ ಕೆಲಸದ ಬಿಲ್ ರೂ. 31,734/-, ಚೆಕ್ ನಂ. 48938

ಒಟ್ಟು ಮೇಲಿನ 5 ಬಿಲ್ಲುಗಳ ಮೊತ್ತವಾದ ರೂ. 1,46,282/- ಗಳನ್ನು ಯಾವುದೇ ಅಳತೆ ಪುಸ್ತಕ ಹಾಗೂ ಪೋಟೋಗ್ರಾಫಿ ಇಲ್ಲದೆ ಕಾಮಗಾರಿ ನಿರ್ವಹಿಸಿರುವುದಿ ಹಣ ಪಡೆದಿರುವುದು ಮೇಲ್ನೋಟಕ್ಕೆ ಕಂಡು

ಬಂದಿದ್ದು ಈ ಹಿನ್ನೆಲೆಯಲ್ಲಿ ಎದುರುದಾರ 1 ಮತ್ತು 2 ರವರ ಕರ್ತವ್ಯಲೋಪದಿಂದ ದುರ್ನಡತೆ ಎಸಗಿರುವುದು ಕಂಡುಬರುತ್ತದೆ. ಆದ್ದರಿಂದ ಸದರಿಯವರ ಹೇಳಿಕೆಯನ್ನು ಈ ಹಂತದಲ್ಲಿ ಒಪ್ಪಲು ಸಾಧ್ಯವಿರುವುದಿಲ್ಲವೆಂದು ತಮ್ಮ ಪ್ರಸ್ತಾವನೆಯಲ್ಲಿ ತಿಳಿಸಿರುತ್ತಾರೆ.

ಮೇಲಿನ ಕಂಡಿಕೆಯಲ್ಲಿ ವಿವರಿಸಿರುವಂತೆ ಆರೋಪಿತ ನೌಕರರ ವಿರುದ್ಧ ಕ್ರಮವಹಿಸಲು ತಿಳಿಸಿರುವಂತೆ ಎರಡನೇ ಆರೋಪಿತರಾದ ಶ್ರೀ ಹೊನ್ನಪ್ಪಗೌಡ, ಹಿಂದಿನ ಕಾರ್ಯದರ್ಶಿ ಪ್ರಸ್ತುತ ದಿನಾಂಕ:31-07-2013ರಲ್ಲಿ ನಿವೃತ್ತರಾಗಿರುವುದರಿಂದ ಸದರಿಯವರ ವಿರುದ್ಧ ಹಣದುರುಪಯೋಗದ ಪ್ರಕರಣವು ಮುಂದುವರೆದ ಪ್ರಕರಣದ ಪ್ರಕ್ರಿಯೇಯಾಗಿದ್ದು ನಿಯಮ 214(2)(ಬಿ)(ii)ರಡಿಯಲ್ಲಿ ಪ್ರಕರಣವನ್ನು ಕೈಗೊಳ್ಳಲು ಅನ್ವಯಿಸುವುದಿಲ್ಲ.

ಮೇಲ್ನೋಟಕ್ಕೆ ಪ್ರಕರಣದ ಸನ್ನಿವೇಶ ಹಾಗೂ ವಾಸ್ತುಅಂಶದ ಹಿನ್ನೆಲೆಯಲ್ಲಿ ಆರೋಪಿತ ನೌಕರರಾದ ಶ್ರೀ ಹೊನ್ನಪ್ಪಗೌಡ ರವರು ಕೆ.ಸಿ.ಎಸ್(ನಡತೆ) ನಿಯಮಗಳು 1966ರ ನಿಯಮ 3(i)ರಿಂದ (iii)ರನ್ವಯ ದುರ್ನಡತೆ ಎಸಗಿರುವುದುರಿಂದ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ಲೋಕಾಯುಕ್ತ ಕಾಯ್ದೆ ಸೆಕ್ಷನ್ 12(3)ರಡಿಯಲ್ಲಿ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸುಮಾಡಿ ಕರ್ನಾಟಕ ನಾಗರೀಕ ಸೇವಾ ನಿಯಮಗಳು (ವರ್ಗೀಕರಣ, ನಿಯಂತ್ರಣ,ಮೇಲ್ಮನವಿ) ನಿಯಮ 1957ರ ನಿಯಮ 14-ಎ ರಡಿ, ಕೆ.ಸಿ.ಎಸ್.ಆರ್ ನಿಯಮ 214(2)(ಬಿ)ರಡಿಯಲ್ಲಿ ಮಂಜೂರಾತಿಯೊಂದಿಗೆ ಮಾನ್ಯ ಉಪಲೋಕಾಯುಕ್ತರಿಗೆ ವಿಚಾರಣೆ ನಡೆಸಲು ನಿರ್ಣಹಿಸಿ, ಅದರಂತೆ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/110/ಗ್ರಾಪಂಕಾ/2018**
**ಬೆಂಗಳೂರು, ದಿನಾಂಕ:-01-02-2020.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಯಲ್ಲಿ ಶ್ರೀ ಹೊನ್ನಪ್ಪಗೌಡ ಹಿಂದಿನ ಕಾರ್ಯದರ್ಶಿ (ಹಾಲಿ ನಿವೃತ್ತ), ಗೋಗಿ ಕೋನ ಗ್ರಾಮ ಪಂಚಾಯಿತಿ, ಶಹಾಪೂರ ತಾಲ್ಲೂಕು, ಕಲಬುರಗಿ ಜಿಲ್ಲೆ, ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ,ಮೇಲ್ಮನವಿ) ನಿಯಮಗಳು 1957ರ ನಿಯಮ 14-ಎರಡಿ, ಕೆ.ಸಿ.ಎಸ್.ಆರ್ ನಿಯಮ 214(2)(ಬಿ)ರಡಿಯಲ್ಲಿ ಮಂಜೂರಾತಿಯೊಂದಿಗೆ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತಪ್ರಾಧಿಕಾರವಾಗಿದ್ದು, ಆಪಾದಿತರಿಗೆ, ನಿಯಮಾನುಸಾರ ಸೂಕ್ತ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

B. Naveenkumar 3/2/2020
(ನವೀನ್ ಕುಮಾರ್. ಬಿ)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ(ಗ್ರಾ.ಪಂ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

1/2/20

**ಗೆ,**

1. ಮಹಾಲೇಖಪಾರು, ಕರ್ನಾಟಕ, ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.(ಮೂಲ ದಾಖಲೆಗಳನ್ನು ಇದರೊಂದಿಗೆ ಹಿಂದಿರುಗಿಸಿದೆ. ಪುಟ ಸಂಖ್ಯೆ: 1 ರಿಂದ 121).
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಕಲಬುರಗಿ ಜಿಲ್ಲೆ.
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಶಹಾಪೂರ ತಾಲ್ಲೂಕು, ಕಲಬುರಗಿ ಜಿಲ್ಲೆ.
6. ಶ್ರೀ ಹೊನ್ನಪ್ಪಗೌಡ ಹಿಂದಿನ ಕಾರ್ಯದರ್ಶಿ (ಹಾಲಿ ನಿವೃತ್ತ), ಗೋಗಿ ಕೋನ ಗ್ರಾಮ ಪಂಚಾಯಿತಿ, ಶಹಾಪೂರ ತಾಲ್ಲೂಕು, ಕಲಬುರಗಿ ಜಿಲ್ಲೆ,
7. ಶಾಖಾ ರಕ್ಷಾ ಕಡತ/ಗಣಕಕೋಶ/ಹೆಚ್ಚುವರಿ/ಪ್ರತಿ.
8. ಗಣಕ ಕೋಶ.